ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಧಾರ್ಮಿಕ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ    ದಿನಾಂಕ : DATE : 20/02/2020

# ರಾಮಮಂದಿರ ಟ್ರಸ್ಟ್‌ಗೆ ಗೋಪಾಲದಾಸ್ ಅಧ್ಯಕ್ಷ



ಪಿಟಿಐ

**ರಾಮಮಂದಿರ ಟ್ರಸ್ಟ್‌ನ ಸಭೆಯಲ್ಲಿ ಟ್ರಸ್ಟ್‌ನ ಅಧ್ಯಕ್ಷರಾದ ನೃತ್ಯ ಗೋಪಾಲದಾಸ್ (ಮಧ್ಯದಲ್ಲಿರುವವರು) ಹಾಗೂ ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ (ಬಲದಿಂದ ಮೊದಲನೆಯವರು) ಸೇರಿ ಇನ್ನಿತರರು ಇದ್ದರು.**

**ನವದೆಹಲಿ:** ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ಸಂಬಂಧ ರಚಿಸಲಾಗಿರುವ ರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಅಧ್ಯಕ್ಷರಾಗಿ ಮಹಾಂತ ನೃತ್ಯ ಗೋಪಾಲದಾಸ್ ಮಹಾರಾಜ್ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಚಂಪತ್ ರಾಯ್ ಸರ್ವಾನುಮತದಿಂದ ಆಯ್ಕೆ ಆಗಿದ್ದಾರೆ.

ಹಿರಿಯ ವಕೀಲ ಕೆ.ಪರಾಶರನ್ ನೇತೃತ್ವದಲ್ಲಿ ಮತ್ತು ಅವರ ನಿವಾಸದಲ್ಲಿ ಬುಧವಾರ ನಡೆದ ಶ್ರೀರಾಮಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಮೊದಲ ಸಭೆಯಲ್ಲಿ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಪ್ರಧಾನಿ ನರೇಂದ್ರ ಮೋದಿಯವರ ಮಾಜಿ ಪ್ರಧಾನ ಕಾರ್ಯದರ್ಶಿ ನೃಪೇಂದ್ರ ಮಿಶ್ರಾ ಮಂದಿರ ನಿರ್ಮಾಣ ಸಮಿತಿಯ ಮುಖ್ಯಸ್ಥರಾಗಿ, ಪುಣೆಯ ಸ್ವಾಮಿ ಗೋವಿಂದ ದೇವಗಿರಿ ಖಜಾಂಚಿಯಾಗಿ ಆಯ್ಕೆಯಾದರು. ಅಯೋಧ್ಯೆಯ ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್‌ಬಿಐ) ಶಾಖೆಯಲ್ಲಿ ಟ್ರಸ್ಟ್‌ನ ಖಾತೆ ತೆರೆಯಲು ನಿರ್ಧರಿಸಲಾಗಿದ್ದು, ದಾನಿಗಳು ನೀಡುವ ಹಣವನ್ನು ಈ ಖಾತೆಯಲ್ಲಿ ಸಂಗ್ರಹಿಸಲಾಗುತ್ತದೆ. ಸಭೆಯಲ್ಲಿ ಮಂದಿರ ನಿರ್ಮಾಣ ಪ್ರಕ್ರಿಯೆಯನ್ನು ತೀವ್ರಗೊಳಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸಲಾಯಿತು ಎಂದು ತಿಳಿದುಬಂದಿದೆ.

- ಮಂದಿರ ನಿರ್ಮಾಣ ಸಮಿತಿಗೆ ನೃಪೇಂದ್ರ ಮಿಶ್ರಾ ಮುಖ್ಯಸ್ಥ
- ಅಯೋಧ್ಯೆಯಲ್ಲಿ ಮುಂದಿನ ಸಭೆ, ದಿನಾಂಕ ನಿಗದಿ ಬಾಕಿ

### ಪೇಜಾವರ ಮಠದಿಂದ ₹5 ಲಕ್ಷ ದೇಣಿಗೆ

**ರಾಮಮಂದಿರ ನಿರ್ಮಾಣ ಕಾರ್ಯಕ್ಕೆ ಮೊದಲ ದೇಣಿಗೆಯಾಗಿ ಪೇಜಾವರ ಮಠದಿಂದ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಹೆಸರಿನಲ್ಲಿ ₹ 5 ಲಕ್ಷವನ್ನು ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹಸ್ತಾಂತರಿಸಿದರು.**

ಟ್ರಸ್ಟ್‌ನ ಕಾಯಂ ಸದಸ್ಯರಾದ ವಾಸುದೇವಾನಂದ ಸರಸ್ವತಿ ಮಹಾರಾಜ್, ಸ್ವಾಮಿ ಪರಮಾನಂದ ಮಹಾಸ್ವಾಮೀಜಿ, ಪೇಜಾವರ ಶ್ರೀವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಸ್ವಾಮಿ ಗೋವಿಂದ ದೇವಗಿರಿ, ಮಹಾಂತ ದಿನೇಂದ್ರದಾಸ್ ಮಹಾರಾಜ್, ವಿಮಲೇಂದ್ರ ಮೋಹನ್ ಪ್ರತಾಪ್ ಮಿಶ್ರಾ, ಡಾ.ಅನಿಲ್ ಮಿಶ್ರಾ, ಕಾಮೇಶ್ವರ ಚೌಪಾಲ ಉಪಸ್ಥಿತರಿದ್ದರು. ಕೇಂದ್ರ ಸರ್ಕಾರದ ಪ್ರತಿನಿಧಿಯಾಗಿ ಹೆಚ್ಚುವರಿ ಗೃಹಕಾರ್ಯದರ್ಶಿ ಜ್ಞಾನೇಶ್ ಕುಮಾರ್, ಉತ್ತರ ಪ್ರದೇಶ ಸರ್ಕಾರದ ಪ್ರತಿನಿಧಿಯಾಗಿ ಐಎಎಸ್ ಅಧಿಕಾರಿ ಅವನೀಶ್ ಅವಸ್ಥಿ, ಅಯೋಧ್ಯಾ ಜಿಲ್ಲಾಧಿಕಾರಿ ಅನುಜ್ ಕುಮಾರ್ ಝಾ ಭಾಗವಹಿಸಿದ್ದರು.

ಟ್ರಸ್ಟ್‌ನ ಪ್ರಥಮ ಸಭೆಯಲ್ಲಿ ಹಲವು ನಿರ್ಣಯಗಳನ್ನು ಕೈಗೊಳ್ಳಲಾಗಿದ್ದು, ಅದರಲ್ಲಿ ಮುಖ್ಯವಾದುದು ರಾಮಮಂದಿರ ನಿರ್ಮಾಣ ಸಮಿತಿ ರಚಿಸಿರುವುದು. ಮುಂದಿನ ಸಭೆ ಅಯೋಧ್ಯೆಯಲ್ಲಿ ನಡೆಯಲಿದ್ದು, ರಾಮಮಂದಿರ ನಿರ್ಮಾಣಕ್ಕೆ ಶಿಲಾನ್ಯಾಸ ದಿನಾಂಕ ಸಹಿತ ಮಹತ್ವದ ತೀರ್ಮಾನಗಳನ್ನು ಕೈಗೊಳ್ಳಲಿದ್ದೇವೆ. ಏ.2ರಂದು ರಾಮನವಮಿಯಂದು ಅಯೋಧ್ಯೆಯಲ್ಲಿ 10ರಿಂದ 15 ಲಕ್ಷ ಜನ ಸೇರುವ [illegible]

17